85-K

# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ

**6ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು – 560003**

**KARNATAKA SCHOOL EXAMINATION AND ASSESSMENT BOARD**
**6th Cross, Malleshwaram, Bengaluru – 560 003**

## 2025–26 ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ – 1

## S.S.L.C. MODEL QUESTION PAPER - 1 : 2025 - 26

## ವಿಷಯ : ಸಮಾಜವಿಜ್ಞಾನ

## Subject : SOCIAL SCIENCE

**ವಿಷಯ ಸಂಕೇತ : 85-K** | **Subject Code : 85-K**

ಸಮಯ : 3 ಗಂಟೆ 15 ನಿಮಿಷಗಳು ] | [ Time : 3 Hours 15 Minutes

ಗರಿಷ್ಠ ಅಂಕಗಳು : 80 ] | [ Max. Marks : 80

---

**ಪರೀಕ್ಷಾರ್ಥಿಗಳಿಗಾಗಿ ಸಾಮಾನ್ಯ ಸೂಚನೆಗಳು :**

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

**I. ಈ ಕೆಳಗಿನ ಪ್ರತಿಯೊಂದು ಪ್ರಶ್ನೆಗೆ / ಅಪೂರ್ಣ ಹೇಳಿಕೆಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಒಂದು ಮಾತ್ರ ಸರಿಯಾಗಿದೆ ಅಥವಾ ಹೆಚ್ಚು ಸೂಕ್ತವಾಗಿದೆ. ಸರಿಯಾದ ಉತ್ತರವನ್ನು ಆರಿಸಿ, ಪೂರ್ಣ ಉತ್ತರವನ್ನು ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ.** **8x1=8**

1. ಮೈಸೂರು ಸಂಸ್ಥಾನದ ರಾಜ್ಯಗೀತೆ ಕಾಯೋ ಶ್ರೀಗೌರಿಯನ್ನು ರಚಿಸಿದವರು

A) ಸಂಚಿಯ ಹೊನ್ನಮ್ಮ

B) ಶ್ಯಾಮಾಶಾಸ್ತ್ರಿ

C) ಬಸಪ್ಪಶಾಸ್ತ್ರಿ

D) ತಿರುಮಲಾರ್ಯ

2. ಪ್ರಥಮ ಮಹಾಯುದ್ಧವನ್ನು ಕೊನೆಗೊಳಿಸಿದ ಒಪ್ಪಂದ

A) ಪ್ಯಾರಿಸ್ ಒಪ್ಪಂದ

B) ಜಿನೇವಾ ಒಪ್ಪಂದ

C) ವರ್ಸೇಲ್ಸ್ ಒಪ್ಪಂದ

D) ತಾಷ್ಕೆಂಟ್ ಒಪ್ಪಂದ

3. ವಿಶ್ವ ಶಾಂತಿಯನ್ನು ಕಾಪಾಡುವ ಉದ್ದೇಶದಿಂದ ಸ್ಥಾಪನೆಯಾಗಿದ್ದ ಲೀಗ್ ಆಫ್ ನೇಷನ್ಸ್ ವಿಫಲವಾಗಲು ಕಾರಣ

A) ವಿಶ್ವಸಂಸ್ಥೆಯ ಸ್ಥಾಪನೆ

B) ಎರಡನೇ ಮಹಾಯುದ್ಧದ ಪ್ರಾರಂಭ

C) ಶೀತಲ ಸಮರದ ಅಂತ್ಯ

D) ಶೀತಲ ಸಮರದ ಪ್ರಾರಂಭ

4. ಕರ್ನಾಟಕದ ಉತ್ತರಕನ್ನಡ ಜಿಲ್ಲೆಯ ಸಲ್ಯಾನಿ ಗ್ರಾಮದಲ್ಲಿ ನಡೆದ ಪರಿಸರ ಚಳವಳಿ

A) ಚಿಪ್ಕೋ ಚಳವಳಿ

B) ಅಪ್ಪಿಕೋ ಚಳವಳಿ

C) ನರ್ಮದಾ ಚಳವಳಿ

D) ಮೌನ ಕಣಿವೆ ಚಳವಳಿ

5. ಭಾರತದಲ್ಲಿ ನಿರ್ಗಮನ ಮಾನ್ಸೂನ್ ಮಾರುತಗಳ ಅವಧಿ

A) ಮಾರ್ಚ್ – ಮೇ

B) ಜೂನ್ – ಸೆಪ್ಟೆಂಬರ್

C) ಅಕ್ಟೋಬರ್ – ನವೆಂಬರ್

D) ಡಿಸೆಂಬರ್ – ಫೆಬ್ರವರಿ

6. 'ಮಾರ್ಗಸೂಚಿ' ಎಂದು ಕರೆಯಲ್ಪಡುವ ತಂತ್ರಜ್ಞಾನ

A) ಆರ್. ಎಸ್. ಟಿ

B) ಜಿ. ಐ. ಎಸ್

C) ಜಿ. ಪಿ. ಆರ್. ಎಸ್

D) ಜಿ .ಪಿ. ಎಸ್

7. ನಮ್ಮ ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಸ್ಥಳೀಯ ಸರಕಾರ ಪದ್ಧತಿಯಲ್ಲಿ ಜಾರಿಗೆ ತರಲಾದ ಪಂಚಾಯತ್ ರಾಜ್ ವ್ಯವಸ್ಥೆಯು ಹೊಂದಿರುವುದು

A) ಎರಡು ಹಂತಗಳನ್ನು

B) ಮೂರು ಹಂತಗಳನ್ನು

C) ಒಂದು ಹಂತವನ್ನು

D) ನಾಲ್ಕು ಹಂತಗಳನ್ನು

8. ಉದ್ಯಮ ಶೀಲತೆಯ ಆಂಗ್ಲಪದವಾದ 'ಎಂಟ್ರಪ್ರೆಂಡೆ'ಯು ಬಂದಿರುವುದು

A) ಇಂಗ್ಲೀಷ್ ಭಾಷೆಯಿಂದ

B) ಲ್ಯಾಟಿನ್ ಭಾಷೆಯಿಂದ

C) ಜರ್ಮನ್ ಭಾಷೆಯಿಂದ

D) ಫ್ರೆಂಚ್ ಭಾಷೆಯಿಂದ

**II. ಈ ಪ್ರತಿಯೊಂದು ಪ್ರಶ್ನೆಗೂ ಒಂದು ವಾಕ್ಯದಲ್ಲಿ ಉತ್ತರಿಸಿ.** **8x1=8**

9. ಭಾರತವನ್ನು ಒಡೆದು ಆಳಲು ಬ್ರಿಟಿಷರು 1909ರ ಭಾರತೀಯ ಪರಿಷತ್ ಕಾಯ್ದೆಯನ್ನು ಹೇಗೆ ಬಳಸಿಕೊಂಡರು?

10. ಹಿಟ್ಲರನು 'ಗೊಬೆಲ್ಸ್' ಹೆಸರಿನ ವಿಶೇಷ ಮಂತ್ರಿಯನ್ನು ಏಕೆ ನೇಮಿಸಿದನು?

11. ವಿಶ್ವಸಂಸ್ಥೆಯ ದತ್ತಿ ಸಮಿತಿಯು ತನ್ನ ಪ್ರಸ್ತುತತೆಯನ್ನು ಕಳೆದುಕೊಂಡಿದೆ. ಏಕೆ?

12. ಪೂರ್ವಾಗ್ರಹವನ್ನು ವ್ಯಾಖ್ಯಾನಿಸಿ.

13. MRPL ವಿರುದ್ಧದ ಚಳವಳಿಯನ್ನು ಏಕೆ ಹಮ್ಮಿಕೊಳ್ಳಲಾಯಿತು?

14. ಮುಂಬಯಿಯನ್ನು 'ಭಾರತದ ಮ್ಯಾಂಚೆಸ್ಟರ್' ಎಂದು ಕರೆಯುತ್ತಾರೆ. ಏಕೆ?

15. ಭಾರತೀಯ ರಿಸರ್ವ್ ಬ್ಯಾಂಕನ್ನು 'ಬ್ಯಾಂಕುಗಳ ಬ್ಯಾಂಕ್' ಎಂದು ಏಕೆ ಕರೆಯುತ್ತಾರೆ?

16. ಕೇಂದ್ರ ಸರಕಾರದ ಮುಂಗಡ ಪತ್ರವನ್ನು ಲೋಕಸಭೆಯಲ್ಲಿ ಯಾರು ಮಂಡಿಸುತ್ತಾರೆ?

**III. ಈ ಪ್ರತಿಯೊಂದು ಪ್ರಶ್ನೆಗೂ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ.** **8x1=8**

17. ಸಾರ್ವಜನಿಕ ಆಡಳಿತದ ಉಪಯೋಗಗಳನ್ನು ಪಟ್ಟಿ ಮಾಡಿ.

**ಅಥವಾ**

ವಿಶ್ವ ಸಂಸ್ಥೆಯ ಭದ್ರತಾ ಮಂಡಳಿಯ ಖಾಯಂ ಸದಸ್ಯರಾಷ್ಟ್ರಗಳನ್ನು ಪಟ್ಟಿ ಮಾಡಿ.

18. ಶಾಸನಾತ್ಮಕ ಕ್ರಮಗಳ ಹೊರತಾಗಿಯೂ ವರದಕ್ಷಿಣೆಯನ್ನು ಹೇಗೆ ನಿಯಂತ್ರಿಸಬಹುದು?

**ಅಥವಾ**

ಸಾಮಾಜಿಕ ಸ್ತರವಿನ್ಯಾಸವು ಹೇಗೆ ರೂಪುಗೊಂಡಿದೆ?

19. 'ದತ್ತುಮಕ್ಕಳಿಗೆ ಹಕ್ಕಿಲ್ಲ ಎಂಬ ನೀತಿಯು ಭಾರತದಲ್ಲಿ ಬ್ರಿಟಿಷ್ ಅಧಿಕಾರದ ವಿಸ್ತರಣೆಗೆ ಸಹಾಯಕವಾಯಿತು' ಸಮರ್ಥಿಸಿ.

20. ಸ್ವಾತಂತ್ರ್ಯಾನಂತರದಲ್ಲಿ ಭಾರತವು ಎದುರಿಸಿದ ಸಮಸ್ಯೆಗಳು ಯಾವುವು?

21. ಮಳೆನೀರು ಕೊಯ್ಲಿನ ವಿಧಗಳಾವುವು?

22. ತೋಟಗಾರಿಕೆ ಮತ್ತು ಪುಷ್ಪ ಬೇಸಾಯವು ಭಾರತೀಯ ರೈತರ ಅಭಿವೃದ್ಧಿಗೆ ಸಹಾಯಮಾಡಿವೆ, ಸಮರ್ಥಿಸಿ.

23. ಹಸಿರು ಕ್ರಾಂತಿಯು ಹಲವಾರು ಅಂಶಗಳಿಂದ ಪ್ರಭಾವಿತವಾಗಿತ್ತು. ಸಮರ್ಥಿಸಿ.

24. ಗ್ರಾಹಕರ ಸಂರಕ್ಷಣಾ ಕಾಯಿದೆಯು ಗ್ರಾಹಕರ ಹಿತರಕ್ಷಣೆಯನ್ನು ಹೇಗೆ ಮಾಡುತ್ತದೆ?

**IV. ಈ ಪ್ರಶ್ನೆಗಳಿಗೆ ಆರು ವಾಕ್ಯ/ಅಂಶಗಳಲ್ಲಿ ಉತ್ತರಿಸಿ. 9x3=27**

25. ಭಾರತಕ್ಕೆ ಹೊಸ ಜಲಮಾರ್ಗವನ್ನು ಕಂಡುಹಿಡಿಯಲು ಕಾರಣವಾದ ಅಂಶಗಳನ್ನು ವಿವರಿಸಿ.

**ಅಥವಾ**

ಬ್ರಿಟಿಷ್ ಭೂಕಂದಾಯ ಪದ್ಧತಿಯಿಂದ ಭಾರತೀಯ ರೈತರ ಮೇಲಾದ ಪರಿಣಾಮಗಳನ್ನು ವಿವರಿಸಿ.

26. ಅರಣ್ಯಗಳು ನಮಗೆ ಹಾಗೂ ಪರಿಸರಕ್ಕೆ ಅತ್ಯಂತ ಉಪಯುಕ್ತವಾಗಿವೆ. ಹೇಗೆ?

**ಅಥವಾ**

ದೂರಸಂವೇದಿ ತಂತ್ರಜ್ಞಾನವು ಇಂದು ಅತ್ಯಂತ ಅವಶ್ಯಕವಾಗಿದೆ. ಹೇಗೆ?

27. ಗ್ರಾಮೀಣ ಭಾರತದಲ್ಲಿನ ಆರ್ಥಿಕ ಪರಿಸ್ಥಿತಿಯನ್ನು ವಿವರಿಸಿ.

**ಅಥವಾ**

ಕೇಂದ್ರ ಸರಕಾರದ ತೆರಿಗೆಯೇತರ ಆದಾಯದ ಮೂಲಗಳನ್ನು ವಿವರಿಸಿ.

28. ಅಂಚೆ ಕಛೇರಿಗಳು ನಡೆಸುವ ಆರ್ಥಿಕ ವ್ಯವಹಾರಗಳಾವುವು?

**ಅಥವಾ**

ದೇಶದ ಆರ್ಥಿಕ ಅಭಿವೃದ್ಧಿಯಲ್ಲಿ ಉದ್ಯಮಿಗಳು ವಹಿಸುವ ಪಾತ್ರವೇನು?

29. ಶ್ರೀನಾರಾಯಣಗುರು ಧರ್ಮಪರಿಪಾಲನಾ ಯೋಗಂ ಜಾರಿಗೆ ತಂದ ಸುಧಾರಣಾ ಕಾರ್ಯಗಳಾವುವು?

30. 1857ರ ದಂಗೆಯ ವಿಫಲತೆಗೆ ಕಾರಣಗಳನ್ನು ವಿವರಿಸಿ.

31. ಭಾರತ ಸರಕಾರವು ಭಯೋತ್ಪಾದನೆಯ ಸವಾಲನ್ನು ಹೇಗೆ ನಿಗ್ರಹಿಸುತ್ತಿದೆ?

32. ಸಂಘಟಿತ ವಲಯದ ಕೆಲಸಗಾರರು ಮತ್ತು ಅಸಂಘಟಿತ ವಲಯದ ಕೆಲಸಗಾರರ ನಡುವಿನ ವ್ಯತ್ಯಾಸಗಳನ್ನು ವಿವರಿಸಿ.

33. ಭೂಕುಸಿತಕ್ಕೆ ಕಾರಣಗಳೇನು?

**V. ಈ ಕೆಳಗಿನ ಪ್ರಶ್ನೆಗಳಿಗೆ ಎಂಟು ವಾಕ್ಯ/ಅಂಶಗಳಲ್ಲಿ ಉತ್ತರಿಸಿ.** **4x4=16**

34. ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬುಡಕಟ್ಟು ದಂಗೆಗಳ ಪಾತ್ರವನ್ನು ವಿವರಿಸಿ.

**ಅಥವಾ**

ದಯಾನಂದ ಸರಸ್ವತಿಯವರ ಕೊಡುಗೆಗಳನ್ನು ವಿವರಿಸಿ.

35. ಮಣ್ಣಿನ ಸವೆತವನ್ನು ತಡೆಗಟ್ಟುವ ವಿಧಾನಗಳಾವುವು?

**ಅಥವಾ**

ಕೈಗಾರಿಕೆಗಳ ಸ್ಥಾನೀಕರಣದ ಮೇಲೆ ಪ್ರಭಾವ ಬೀರುವ ಅಂಶಗಳಾವುವು?

36. ನಾಲ್ವಡಿ ಕೃಷ್ಣರಾಜ ಒಡೆಯರ ಸಾಧನೆಗಳನ್ನು ವಿವರಿಸಿ.

37. ಭ್ರಷ್ಟಾಚಾರವನ್ನು ನಿಯಂತ್ರಿಸಲು ಸರಕಾರವು ಕೈಗೊಂಡಿರುವ ಕ್ರಮಗಳನ್ನು ವಿವರಿಸಿ.

**VI. 38. ಈ ಕೆಳಗಿನವುಗಳಲ್ಲಿ ಯಾವುದಾದರೂ ಐದನ್ನು ನಿಮಗೆ ಕೊಟ್ಟಿರುವ ಭಾರತದ ನಕ್ಷೆಯಲ್ಲಿ ಗುರುತಿಸಿ.** **5x1=5**

A. ಇಂದಿರಾ ಪಾಯಿಂಟ್
B. $23^{0}.30'$ ಉತ್ತರ ಅಕ್ಷಾಂಶ
C. ಪಾಕ್ ಜಲಸಂಧಿ
D. ಭಾಕ್ರಾನಂಗಲ್ ಅಣೆಕಟ್ಟು
E. ತಾರಾಪುರ
F. ಮುಂಬೈ
G. ಕೊಚ್ಚಿ
H. ಪಾರಾದೀಪ
I. ವಿಶಾಖಪಟ್ಟಣಂ
J. ದುರ್ಗಾಪುರ

**ದೃಷ್ಟಿವಿಕಲ ಚೇತನ ವಿದ್ಯಾರ್ಥಿಗಳಿಗೆ ಪರ್ಯಾಯ ಪ್ರಶ್ನೆ:**

**(ಪ್ರಶ್ನೆ ಸಂಖ್ಯೆ 38ರ ಬದಲಿಗೆ)**

ವಿವಿಧೋದ್ದೇಶ ನದಿ ಕಣಿವೆ ಯೋಜನೆಗಳ ಪ್ರಮುಖ ಉದ್ದೇಶಗಳಾವುವು?

**ಅಥವಾ**

ಹಿಮಾಲಯ ಪರ್ವತಗಳ ಅನುಕೂಲಗಳಾವುವು?